

ಅರ್ಥಪೂರ್ಣವಾಗಿ ಆಚರಣೆಯಾಗುತ್ತಾ ಬಂದಿದೆ.


ಇದೇನು ‘ಭಕ್ತರಿಂದಲೇ ಆಚರಿಸಲಾಗುವ ಸಂಕ್ರಾಂತಿ’ ಎಂದು ಅಚ್ಚರಿಗೊಳ್ಳುವಿರಾ? ಇಲ್ಲಿ ಆಚರಿಸುವ ಸಂಕ್ರಾಂತಿಗೆ ಬೇಕಾದ ರಂಗೋಲಿಯಿಂದ ಹಿಡಿದು ಪುಡಿ ರೊಟ್ಟಿಯವರೆಗೂ ಎಲ್ಲವನ್ನು ಭಕ್ತರೇ ಹೊತ್ತು ತರುತ್ತಾರೆ. ಹಿಂದಿನ ದಿನವೇ ಬರುವ ಸೇವಾ ಮನೋಭಾವದ ಹಲವು ಭಕ್ತರು ಬೆಳಿಗ್ಗೆ ಬೇಗನೆ ಎದ್ದು ಪ್ರಾಂಗಣವನ್ನೆಲ್ಲ ಶುಭ್ರಗೊಳಿಸುತ್ತಾರೆ. ಹೆಣ್ಣು ಮಕ್ಕಳು ಸಗಣಿ ಸಾರಿಸುತ್ತಾರೆ. ರಂಗೋಲಿ ಮೂಡಿಸಲು ಹಲವರು ಸಿದ್ಧರಿರುತ್ತಾರೆ. ಬೆಳಗಾಗುವ ವೇಳೆಗೆ ಅಲ್ಲಿನ ಇಡೀ ವಾತಾವರಣವೇ ಹಬ್ಬದ ವಾತಾವರಣವಾಗಿ ಪರಿವರ್ತಿತವಾಗಿಬಿಟ್ಟಿರುತ್ತದೆ. ಇಂತಹ ಕೆಲಸಗಳನ್ನು ಇವರೇ ಮಾಡಬೇಕೆಂಬ ಯಾವುದೇ ಕಟ್ಟುಪಾಡುಗಳಿಲ್ಲದಿದ್ದರೂ, ಎಲ್ಲವೂ ಅಚ್ಚುಕಟ್ಟಾಗಿ ಸಿದ್ಧಗೊಂಡು ಬಿಟ್ಟಿರುತ್ತದೆ. ಬೆಳಗಾಗುತ್ತಿದ್ದ ಹಾಗೆ ಎಲ್ಲರಿಗೂ ಅಭ್ಯಂಜನ ಸ್ನಾನಕ್ಕೆ ಎಳ್ಳೆಣ್ಣೆ ಆಗಲೇ ಪಾತ್ರೆಯಲ್ಲಿ ಸಿದ್ಧವಿರುತ್ತದೆ. ಇದು ಕೂಡ ಯಾರೋ ಭಕ್ತರು ತಂದದ್ದಾಗಿರುತ್ತದೆ. ಎಳ್ಳೆಣ್ಣೆ ಹಚ್ಚಿಕೊಂಡು, ಹೊಂಬಿಸಿಲಿಗೆ ಮೈಯೊಡ್ಡಿ ಬಿಸಿ ನೀರಿನ ಸ್ನಾನ ಮಾಡುತ್ತಿದ್ದರೆ ಏನು ಹೇಳುತ್ತೀರಾ?

ಭಕ್ತರ ಸ್ನಾನಕ್ಕೂ ಪೂರ್ವದಲ್ಲಿಯೇ, ಬೇಗನೆ ಎದ್ದು ಸ್ನಾನ ಮುಗಿಸಿಕೊಂಡು ಪೂಜಾ ಕೈಂಕರ್ಯಗಳನ್ನು ನೆರವೇರಿಸಲು, ಸ್ವಾಮೀಜಿಗಳು ಸಿದ್ಧರಾಗಿರುತ್ತಾರೆ. ಶ್ರೀ ಸಿದ್ದೇಶ್ವರ ದೇವಸ್ಥಾನದಲ್ಲಿ ಪೂಜೆ, ಅಭಿಷೇಕ ಮಂತ್ರಘೋಷಗಳು ಮೊಳಗುತ್ತವೆ. ಪಾಕಶಾಲೆಯಲ್ಲಿ ಭಕ್ತರಿಂದಲೇ ಬಿಸಿಬಿಸಿಯಾದ ಉಪಾಹಾರ ಸಿದ್ಧವಾಗುತ್ತದೆ. ಬೆಟ್ಟದ ಪ್ರಸ್ತುತ ಕ್ರಿಯಾ ಮೂರ್ತಿಗಳಾದ ಸೋಮಣ್ಣ ಸ್ವಾಮಿಗಳು, ಬಂದ ಭಕ್ತರನ್ನೆಲ್ಲಾ ಆತ್ಮೀಯತೆಯಿಂದ ಮಾತನಾಡಿಸುತ್ತಾ, ಅವರ ಯೋಗಕ್ಷೇಮವನ್ನು ವಿಚಾರಿಸಿ, ದಣಿದು ಬಂದಿದ್ದೀರಿ, ಮುಖ ತೊಳೆದು ವಿಶ್ರಾಂತಿ ಪಡೆಯಿರಿ, ಪ್ರಸಾದ ಸ್ವೀಕರಿಸಿ ದೇವರ ದರ್ಶನ ಪಡೆದುಕೊಳ್ಳಿ… ಎಂಬ ನುಡಿಗಳು ಆಯಾಸದಿಂದ ಬಂದ ಭಕ್ತರಿಗೆ ದಣಿವನ್ನು ಮರೆಸುತ್ತವೆ.

ಉಪಾಹಾರ ಸೇವನೆಯಾದ ನಂತರ, ಅಗಲವಾದ ಹರಿವಾಣದಲ್ಲಿ ಸಿದ್ಧವಾಗಿರುವ ಎಳ್ಳು–ಬೆಲ್ಲದ ವಿನಿಮಯ ನಡೆಯುತ್ತದೆ. ಇದಾಗುತ್ತಲೇ ಮಹಲ್ಲಿನ ಸಭಾಂಗಣದಲ್ಲಿ ಕುಮಾರವ್ಯಾಸ ಭಾರತದ ಕೆಲವು ಪರ್ವಗಳ ವಾಚನ ಮತ್ತು ಅರ್ಥ ವಿವರಣೆ ರಸಪೂರ್ಣವಾಗಿರುತ್ತದೆ. ಮಹಾಭಾರತ ಕಥಾಮೃತವನ್ನು ಭಕ್ತಗಣ ಸವಿಯುತ್ತಾರೆ. ಭೀಷ್ಮ ಪರ್ವದ ಬಗ್ಗೆ, ಭೀಷ್ಮ ಇಚ್ಛಾಮರಣಿಯಾದ ಬಗ್ಗೆ ಈ ದಿನ ವಿಶೇಷವಾಗಿ ತಿಳಿಸಿ ಕೊಡುತ್ತಾರೆ.

ಸಮಯ ಹನ್ನೆರಡು ಆಗುತ್ತಿದ್ದಂತೆ, ಭಕ್ತರಿಂದಲೇ ತಯಾರಾದ ಪ್ರಸಾದ ಮೂಗಿಗೆ ಘಮ್ಮೆಂದು ಬಡಿಯುತ್ತದೆ. ತಟ್ಟೆಗಳು ಸದ್ದು ಮಾಡಲಾರಂಭಿಸುತ್ತವೆ. ಭಕ್ತರು ಶಿಸ್ತಿನ ಸಿಪಾಯಿಗಳಂತೆ, ಸಾಲಾಗಿ ನಿಂತು ಪ್ರಸಾದ ನೀಡಿಸಿಕೊಳ್ಳುತ್ತಾರೆ. ಭೇದ ಭಾವವಿಲ್ಲದೆ ಗುಂಪಾಗಿ ಕುಳಿತು ಪ್ರಸಾದವನ್ನು ಸವಿಯುತ್ತಾರೆ. ಇಲ್ಲಿ ಪ್ರಸಾದ ಬಡಿಸುವವರು ಭಕ್ತರೇ ಎಂಬುದು ವಿಶೇಷ. ಪ್ರಸಾದದ ಬಳಿಕ ತಾಂಬೂಲವು ಸಿದ್ಧವಾಗುತ್ತದೆ. ಈ ತಾಂಬೂಲವನ್ನೂ ಯಾರೋ ಭಕ್ತರು ತಂದಿರುತ್ತಾರೆ. ಪ್ರಸಾದದ ಬಳಿಕ ಪ್ರತಿ ಭಕ್ತರು ತಮ್ಮ ತಟ್ಟೆಗಳನ್ನು ತಾವೇ ತೊಳೆಯುತ್ತಾರೆ. ಎಲ್ಲರ ಪ್ರಸಾದವಾದ ಬಳಿಕ, ಪಾತ್ರೆ ಪಗಡೆಗಳನ್ನು ಭಕ್ತರೇ ಬೆಳಗುತ್ತಾರೆ.

ಪ್ರಸಾದದ ಬಳಿಕ ಕೆಲವರು ಸ್ವಲ್ಪ ಸಮಯದವರೆಗೆ ವಿಶ್ರಾಂತಿಗೆ ಜಾರುತ್ತಾರೆ. ಮಕ್ಕಳು ಮರಿಗಳು ಓರಗೆಯವರೊಡನೆ ಆಟವಾಡುತ್ತಾ ಖುಷಿಪಡುತ್ತಾರೆ. ಹಿರಿಯರು ಕಷ್ಟ ಸುಖ ಮಾತನಾಡುತ್ತಾರೆ. ಸಮಯ ನಾಲ್ಕು ಗಂಟೆಯಾಗುತ್ತಿದ್ದಂತೆ ಬಿಸಿ ಬಿಸಿ ಮಿರ್ಚಿ, ವಡೆ, ಮಂಡಕ್ಕಿ ಸಿದ್ಧವಾಗುತ್ತವೆ. ಮಂಡಕ್ಕಿ, ಮಿರ್ಚಿ ಸವಿದ ಬಳಿಕ, ಬೆಟ್ಟದಿಂದ ಇಳಿದು ತಮ್ಮ ಗೂಡುಗಳ ಕಡೆ ಸಾಗಲು ಅಣಿಯಾಗುತ್ತಾರೆ.



ಮೌರ್ಯರ ಕಾಲದ
ಸಮಾಧಿಗಳು

ಇಲ್ಲಿಗೆ ಒಂದು ಕಡ್ಡಿ ಪಟ್ಟಣ ಬೇಕಾದರೂ ದುರ್ಗಮ ಬೆಟ್ಟದಿಂದ ಇಳಿದೇ ತರಬೇಕು. ಆದರೆ ಇಂಥದ್ದಿಲ್ಲ ಎನ್ನುವ ಹಾಗೆ ಎಲ್ಲವೂ ಇಲ್ಲಿರುತ್ತದೆ. ಇದಕ್ಕೆಲ್ಲ ಕಾರಣ ಭಕ್ತರ ದಾನದ ಗುಣ. ಯಾರು ಯಾರಿಗೂ ಇಂಥದ್ದನ್ನೇ ತರಬೇಕೆಂದು ಹೇಳದಿದ್ದರೂ, ಎಲ್ಲರೂ ತಮ್ಮ ತಮ್ಮ ಇಚ್ಛಾನುಸಾರ ಏನಾದರೂ ಒಂದನ್ನು ತಂದಿರುತ್ತಾರೆ. ಎಲ್ಲರೂ ಎಲ್ಲರಿಗಾಗಿ ಎಂಬ ತತ್ವ ಇಲ್ಲಿ ಸಾಕಾರಗೊಂಡಿದೆ. ಇದಕ್ಕೆಲ್ಲ ಕಾರಣ ಕ್ಷೇತ್ರನಾಥ ಸಿದ್ದೇಶ್ವರ ಮತ್ತು ಲಿಂಗೈಕ್ಯ ಮಹಾದೇವಪ್ಪ ತಾತನವರ ಅನುಗ್ರಹವೇ ಕಾರಣ ಎನ್ನುತ್ತಾರೆ ಭಕ್ತ ಗಣ. ಈ ಬೆಟ್ಟದಲ್ಲಿ ಸಿದ್ದೇಶ್ವರ ದೇವಸ್ಥಾನವಲ್ಲದೆ ತ್ರಿಶಂಕೇಶ್ವರ ದೇವಾಲಯ, ಪ್ರಕೃತಿ ನಿರ್ಮಿತ ಹಲವು ಕೊಳಗಳು, ಪುರಾತನ ಕೋಟೆ, ಗುಹೆಗಳು, ಆದಿ ಮಾನವರು ಬಿಡಿಸಿದ ವರ್ಣಚಿತ್ರಗಳು, ಉಬ್ಬು ಶಿಲ್ಪಗಳು ಇವೆ. ಬಿಡುವು ಮಾಡಿಕೊಂಡು ಇವುಗಳನ್ನೆಲ್ಲವನ್ನು ನೀವು ಕಣ್ತುಂಬಿಕೊಳ್ಳಬಹುದು.

ಹೀಗೆ ಬೆಟ್ಟದಷ್ಟು ಅನುಭವಗಳನ್ನು ನೀಡುತ್ತದೆ ಬ್ರಹ್ಮಗಿರಿ ಬೆಟ್ಟದ ಸಂಕ್ರಾಂತಿ. ಬೆಟ್ಟವನ್ನು ಹತ್ತಲು ಸ್ವಲ್ಪ ತ್ರಾಸದಾಯಕವೆನಿಸಿದರೂ, ಮನಸ್ಸು ಮಾಡಿದರೆ ಏನೂ ದೊಡ್ಡದಲ್ಲ. ನಾನು ಕಳೆದ ವರ್ಷದ ಸಂಕ್ರಾಂತಿಗೆ ಹೋಗಿದ್ದಾಗ ವಿಕಲಚೇತನರೊಬ್ಬರು ಆರಾಮವಾಗಿ ಬೆಟ್ಟ ಹತ್ತಿದನ್ನು ನೋಡಿ ಅಚ್ಚರಿಯಾಯಿತು. ಅರವತ್ತು, ಎಪ್ಪತ್ತು ವರ್ಷದ ವಯಸ್ಸಿನವರು ಆರಾಮವಾಗಿ ಹತ್ತುತ್ತಿದ್ದರು. ನೀವು ಬೆಟ್ಟವನ್ನು ಹೇಗೆ ಸುಲಭವಾಗಿ ಹತ್ತುತ್ತಿದ್ದೀರಿ? ಎಂದು ಕೇಳಿದರೆ, ಇದೆಲ್ಲವೂ ಈ ಕ್ಷೇತ್ರದ ಮಹಿಮೆ ಎಂದು ತಿಳಿಸಿದರು. ಬೆಟ್ಟವನ್ನು ಹತ್ತುವಾಗ ಆಯಾಸವಾದರೆ, ಅಲ್ಲಲ್ಲಿ ನಿಸರ್ಗ ನಿರ್ಮಿತ ವಿಶ್ರಾಂತಿ ತಾಣಗಳಿವೆ. ಅದರಲ್ಲೂ ಮಾರ್ಗದ ಮಧ್ಯ ಇರುವ ಗಾಳಿ ಬಂಡೆ ಅಥವಾ ವಿಶ್ರಾಂತಿ ಬಂಡೆಯ ಹತ್ತಿರ ಒಂದೈದು ನಿಮಿಷ ಕುಳಿತರೆ ಆಯಾಸವೆಲ್ಲ ಮಾಯವಾಗಿ, ಮುಂದೆ ಹತ್ತಲು ಸ್ಫೂರ್ತಿ ದೊರೆಯುತ್ತದೆ.

ಒಟ್ಟಿನಲ್ಲಿ ಭಕ್ತ ಗಣವೇ ಭಕ್ತಿ ಶ್ರದ್ಧೆಗಳಿಂದ, ನಿಸ್ವಾರ್ಥ ಭಾವದಿಂದ, ಒಂದಾಗಿ ಭೇದ ಭಾವಗಳಿಲ್ಲದೆ… ಆಚರಿಸುವ ಸಂಕ್ರಾಂತಿ ಹಬ್ಬದಲ್ಲಿ ಪಾಲ್ಗೊಳ್ಳುವ ಇಚ್ಛೆ ನಿಮಗಿದ್ದರೆ ಈ ಬಾರಿಯ ಸಂಕ್ರಾಂತಿಗೆ ತಪ್ಪದೆ ಬನ್ನಿ.

## ಬ್ರಹ್ಮಗಿರಿ ಬೆಟ್ಟಕ್ಕೆ ತಲುಪುವ ಮಾರ್ಗ

ಬ್ರಹ್ಮಗಿರಿ ಬೆಟ್ಟವು ಮೊಳಕಾಲ್ಮೂರು ತಾಲ್ಲೂಕಿನಲ್ಲಿದೆ. ಬಳ್ಳಾರಿ ಕಡೆಯಿಂದ ಬರುವವರಿಗೆ ರಾಂಪುರದವರೆಗೆ ಬಸ್ಸುಗಳ ವ್ಯವಸ್ಥೆ ಇದ್ದು,ಅಲ್ಲಿಂದ ಖಾಸಗಿ ಆಟೊ ಹಿಡಿದು ಇಲ್ಲಿಗೆ ತಲುಪಬೇಕು. ಚಿತ್ರದುರ್ಗ ಕಡೆಯಿಂದ ಬರುವವರಿಗೆ ಖಾಸಗಿ ಬಸ್ಸುಗಳ ವ್ಯವಸ್ಥೆ ಇದ್ದು ಅಶೋಕ ಸಿದ್ದಾಪುರ ಕ್ರಾಸ್‌ನಲ್ಲಿ ಇಳಿದರೆ ಖಾಸಗಿ ಆಟೊಗಳು ಲಭ್ಯವಿವೆ. ಸ್ವಂತ ವಾಹನ ಇರುವವರಿಗೆ ಉತ್ತಮ ರಸ್ತೆ ಇದ್ದು, ಬೆಟ್ಟದ ಬಳಿಯಲ್ಲಿ ವಾಹನಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಇದೆ.